ರೇಷ್ಮೆ ಉತ್ಪಾದನೆ ಕುಸಿಯುತ್ತಿರುವುದು

5378 (5714); ಶ್ರೀ ಮಂಜುನಾಥ್ ಗೌಡ ಕೆ. ಎಸ್. (ಮಾಲೂರು)

ಅ) ಕೋಲಾರ ಜಿಲ್ಲೆಯಲ್ಲಿರುವ ರೇಷ್ಮೆ ಬೆಳೆಗಾರರ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು);

ಆ) ಕಳೆದ ಮೂರು ವರ್ಷಗಳಿಂದ ಉತ್ಪಾದನೆಯಾಗುತ್ತಿರುವ ರೇಷ್ಮೆ ಎಷ್ಟು; (ಮಾಹಿತಿ ನೀಡುವುದು)

ಇ) ರೇಷ್ಮೆ ಬೆಳೆಗಾರರಿಗೆ ಆಧುನಿಕ ರೇಷ್ಮೆ ಬೇಸಾಯದ ಸೌಲಭ್ಯಗಳು ತಲುಪಿದೆಯೇ; ಹಾಗಿದ್ದಲ್ಲಿ, ಆಧುನಿಕ ರೇಷ್ಮೆ ಬೇಸಾಯದ ಸೌಲಭ್ಯಗಳು ಒದಗಿಸಿದ್ದರೂ ರೇಷ್ಮೆ ಉತ್ಪಾದನೆ ಕುಸಿಯಲು ಕಾರಣಗಳೇನು (ಸಂಪೂರ್ಣ ಮಾಹಿತಿ ಒದಗಿಸುವುದು)?

ಶ್ರೀ ಎ. ಮಂಜು (ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ರಾಜ್ಯ ಸಚಿವರು)

ಅ) ಕೋಲಾರ ಜಿಲ್ಲೆಯಲ್ಲಿ 17945 ರೇಷ್ಮೆ ಬೆಳೆಗಾರರು ರೇಷ್ಮೆ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ, ತಾಲ್ಲೂಕುವಾರು ವಿವರಗಳು ಕೆಳಕಂಡಂತಿದೆ.

ಕ್ರ. ಸಂ.	ತಾಲ್ಲೂಕು	ರೇಷ್ಮೆ ಬೆಳೆಗಾರರ ಸಂಖ್ಯೆ
1	ಕೋಲಾರ	6573
2	ಬಂಗಾರಪೇಟೆ	3166
3	ಮಾಲೂರು	1607
4	ಮುಳಬಾಗಿಲು	2725
5	ಶ್ರೀನಿವಾಸಪುರ	3874
	ಒಟ್ಟು	**17945**

ಅ) ರಾಜ್ಯದ ಕಳೆದ ಮೂರು ವರ್ಷಗಳ ರೇಷ್ಮೆ ಗೂಡು ಹಾಗೂ ರೇಷ್ಮೆ ಉತ್ಪಾದನೆ ಕೆಳಕಂಡಂತಿದೆ.

ಕ್ರ. ಸಂ.	ವರ್ಷ	ರೇಷ್ಮೆ ಗೂಡು ಉತ್ಪಾದನೆ (ಮೆ. ಟನ್)	ರೇಷ್ಮೆ ಉತ್ಪಾದನೆ (ಮೆ. ಟನ್)
1	2012–13	49.441	7,063
2	2013–14	61,419	8,574
3	2014–15	68,759	9,645
4	2015–16 (ಅಕ್ಟೋಬರ್ 15ರ ಅಂತ್ಯಕ್ಕೆ)	39,751	5,527

ಇ) ರೇಷ್ಮೆ ಬೆಳೆಗಾರರಿಗೆ ಸುಧಾರಿತ ಹಿಪ್ಪುನೇರಳೆ ತಳಿ, ಉತ್ತಮ ತೋಟ ನಿರ್ವಹಣೆ ಕುರಿತಾಗಿ ಟ್ರೆಂಚಿಂಗ್ ಮತ್ತು ಮಲ್ಚಿಂಗ್, ಬೇರುಕೊಳೆ ರೋಗ ನಿವಾರಣೆ, ಎಲೆಗಳ ಗುಣಮಟ್ಟ ಸುಧಾರಣೆಗೆ ಸಸ್ಯ ಸಂವರ್ಧಕಗಳು ಹಾಗೂ ಸುಧಾರಿತ ಹುಳು ಸಾಕಾಣಿಕ ತಂತ್ರಜ್ಞಾನ, ನೂತನ ಸುಧಾರಿತ ರೋಟರಿ ಚಂದ್ರಿಕೆ, ಸೋಂಕು ನಿವಾರಣೆ ಇತ್ಯಾದಿ ಅಧುನಿಕ ರೇಷ್ಮೆ ಬೇಸಾಯ ಪದ್ಧತಿಗಳನ್ನು ಇಲಾಖೆ ವಿಸ್ತರಣಾ ಚಟುವಟಿಕೆಗಳ ಅಂಗವಾಗಿ ರೈತರಿಗೆ ತಲುಪಿಸಲು ಗ್ರಾಮಮಟ್ಟದ ತರಬೇತಿ, ಪ್ರಾತ್ಯಕ್ಷತೆ, ಕ್ಷೇತ್ರೋತ್ಸವ, ಕರಪತ್ರ, ನೂತನ ತಂತ್ರಜ್ಞಾನದ ಕೈಪಿಡಿಗಳು ಹಾಗೂ ರೇಷ್ಮೆ ಕ್ಯಾಲೆಂಡರ್ ಇತ್ಯಾದಿಗಳ ಮೂಲಕ ರೈತರಿಗೆ ತಲುಪಿಸಲಾಗುತ್ತಿದೆ.

ಒಟ್ಟಾರೆ ಮೇಲಿನ ಎಲ್ಲಾ ಕಾರ್ಯಕ್ರಮಗಳ ಅನುಷ್ಠನದಿಂದ ರೇಷ್ಮೆ ಗೂಡು/ಕಚ್ಚಾ ರೇಷ್ಮೆ ಉತ್ಪಾದನೆಯಲ್ಲಿ ಹೆಚ್ಚಳ ಕಂಡುಬಂದಿದೆ.